Representation by the members

Re :-Constitution of a Commision by the Government of India to Solve inter-state River water Disputes

ಶ್ರೀ ಎಚ್.ಡಿ. ದೇವೇಗೌಡ.—ಸ್ವಾಮಿ, ಬಹಳ ಪ್ರಾಮುಖ್ಯವಾದ ವಿಷಯದ ಬಗ್ಗೆ ಈ ಸಭೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ತಮ್ಮ ಅನುಮತಿಯನ್ನು ಕೋರುತ್ತೇನೆ. ನಿನ್ನೆ ಈ ಸದನದಲ್ಲಿ ಬೃಹತ್ ನೀರಾವರಿ ಬಗ್ಗೆ ಮತ್ತಿತರ ಬೇಡಿಕೆಗಳ ಬಗ್ಗೆ ಚರ್ಚೆ ಮಾಡಿ ಅಂಗೀಕಾರವನ್ನು ಕೂಡ ಮಾಡಿದೆ. ನಿನ್ನೆಯ ದಿವಸ ನಾನು ಮಾತನಾಡುತ್ತಿದ್ದಂಥ ಕಾಲದಲ್ಲಿ ಇದರ ಬಗ್ಗೆ ನಾನು ಕಳವಳವನ್ನು ವ್ಯಕ್ತಪಡಿಸಿದ್ದೆ. ಇವತ್ತು ಈಗಾಗಲೇ ಹಿಂದೂ ಪತ್ರಿಕೆಯಲ್ಲಿ ವರದಿಯಾಗಿರುವ ಪ್ರಕಾರ ಪ್ರತಿಯೊಂದು ರಿವರ್ ಬೇಸಿನ್‌ಗೂ ಸಂಬಂಧಪಟ್ಟಂತೆ ಒಂದು ಕಮಿಷನನ್ನು ನೇಮಕ ಮಾಡತಕ್ಕದರ ಬಗ್ಗೆ ಈಗಾಗಲೇ ಕೇಂದ್ರ ಸರ್ಕಾರದವರುಡ್ರಾಫ್ಟ್‌ನ್ನು ತಯಾರು ಮಾಡಿ ಅದನ್ನು ಸಚಿವ ಸಂಪುಟದ ಮುಂದೆ ಮಾನ್ಯತೆ ಪಡೆಯಲ್ಲಿಕ್ಕಾಗಿ, ಅಂಗೀಕಾರವನ್ನು ಪಡೆಯಲಿಕ್ಕೆ ಎಲ್ಲಾ ಸಿದ್ಧತೆಗಳನ್ನೂ ಮಾಡಿಕೊಂಡು ಮುಂದಿನ ಆಗಸ್ಟ್ ತಿಂಗಳಲ್ಲಿ ನಡೆಯುವ ಪಾರ್ಲಿಮೆಂಟ್ ಅಧಿವೇಶನದಲ್ಲಿ ಅದನ್ನು ಮಂಡನೆ ಮಾಡತಕ್ಕದರ ಬಗ್ಗೆ ಕೂಡ ನಿರ್ಣಯವನ್ನು ಕೂಡ ತೆಗೆದುಕೊಂಡಿದ್ದಾರೆ ಎನ್ನತಕ್ಕದ್ದು ಪತ್ರಿಕೆಯಲ್ಲಿ ವರದಿ ಮಾಡಿದ್ದಾರೆ. ಸ್ವಾಮಿ ನಾವು ಈ ವಿಷಯದ ಬಗ್ಗೆ ಪಕ್ಷಾತೀತವಾಗಿ ನೋಡಿಕೊಳ್ಳಬೇಕಾಗುತ್ತದೆ ರಾಜ್ಯದ ಹಿತವನ್ನು ಕಾಪಾಡತಕ್ಕ ಕಾಲದಲ್ಲಿ ಬಹುಶಃ ಯಾವುದೇ ಒಂದು ರಾಜಕೀಯವನ್ನು ಇದರಲ್ಲಿ ಒಡ್ಡತಕ್ಕದ್ದು ಯೋಗ್ಯವಲ್ಲ. ನಾನು ಇವತ್ತು ಮಾನ್ಯ ಮುಖ್ಯಮಂತ್ರಿಗಳವರಿಗೆ ತಮ್ಮ ಮುಖೇನ ಸೂಚನೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇದರಿಂದ ಆಗತಕ್ಕ ಅನಾಹುತ ಕೇವಲ ಏನೋ ಹುಡುಗಾಟಿಕೆ ಅಥವಾ ರಾಜಕೀಯ ಉದ್ದೇಶದಿಂದ ಈ ಮಾತನ್ನು ನಾನು ಹೇಳುತ್ತಿಲ್ಲ, ಮುಂದೆ ಇದರಿಂದ ಆಗತಕ್ಕ ಇಂಪ್ಲಿಕೇಷನ್ ಏನು ಎನ್ನುವ ಬಗ್ಗೆ ಅದನ್ನು ಓದಿ ಹೇಳುವುದಕ್ಕೆ ತಮ್ಮ ಅಪ್ಪಣೆಯನ್ನು ಬೇಡುತ್ತೇನೆ. "Sharing of water of such rivers among the basin States and the consequent delay in implemention of a number of irrigation projects" ಎಲ್ಲಾ ವಿಷಯಗಳನ್ನು ಪೂರ್ಣವಾಗಿ ಪರಿಶೀಲನೆ ಮಾಡತಕ್ಕ ಹಕ್ಕು ಅವರಿಗೆ ಹೋಗುತ್ತದೆ, ಜೊತೆಗೆ ಮುಂದೆ ಏನು ಹೇಳಿದ್ದಾರೆ ಎಂದರೆ ...

> "Instead, the Centre has sought to arm itself with power as provided in Entry 56 of the Union list, which says that regulation and development of inter-State rivers and river basins will be in the Union List to the extent to which such regulation and development under the control of the Union is declared by law to be expedient in public interest."

ಸ್ವಾಮಿ ಇದರಿಂದ ತುಂಬಾ ಅನಾಹುತ ನಮ್ಮ ರಾಜ್ಯಕ್ಕೆ ಆಗುತ್ತದೆ. ಕರ್ನಾಟಕದ ಮುಖ್ಯಮಂತ್ರಿಗಳು ಏನು ತಿಳಿದುಕೊಂಡಿದ್ದಾರೆ ನಾವು ಕೇಂದ್ರದ ನಾಯಕರೊಡನೆ ತುಂಬಾ ಸಮೀಪದಲ್ಲಿದ್ದೇವೆಂದು. ಇದು ತಾವು ಒಬ್ಬರೇ ಅಲ್ಲ ಹಿಂದೆ ಕೂಡ ಹೀಗೆಯೇ ಎಷ್ಟೋ ಜನ ತಿಳಿದುಕೊಂಡಿದ್ದವರು ಹೋಗಿದ್ದಾರೆ. ತಮಿಳುನಾಡಿನ ಸರ್ಕಾರ ಇವತ್ತು ಬೇರೆ ಪಕ್ಷದ ಸರ್ಕಾರ ಇರಬಹುದು, ಆದರೆ ಕೇಂದ್ರ ಸರ್ಕಾರದಲ್ಲಿರತಕ್ಕ ಮಂತ್ರಿಗಳವರು ಬಹಳ ಪ್ರಭಾವಯುತವಾಗಿ ಕೆಲಸ ಮಾಡುತ್ತಿದ್ದಾರೆ. ಆ ಹಿನ್ನೆಲೆಯಲ್ಲಿ ಈ ಒಂದು ಆ್ಯಕ್ಟ್ ಬರುತ್ತಿದೆ ಎನ್ನತಕ್ಕದ್ದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಕೇಂದ್ರದ ಪಣಕಾಸಿನ ಸಚಿವರು ಇದರಲ್ಲಿ ಕೈವಾಡ ಇಟ್ಟುಕೊಂಡಿದ್ದಾರೆ. ತಾವು ಅನ್ಯಥಾ ಭಾವಿಸಿ ಕೊಳ್ಳಬಾರದಿದ್ದರೆ ಹಿಂದೆ ಕೂಡ ಕಾವಂರಾಜರು ಮತ್ತು ಸಂಜೀವ ರೆಡ್ಡಿಯವರು ಕೆಲಸ ಮಾಡಿದ್ದಾರೆ ಇದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ನಿಮ್ಮಲ್ಲಿ ಅನುಭವಸ್ಥರಿದ್ದಾರೆ, ಒಳ್ಳೆಯ ತಜ್ಞರಿದ್ದಾರೆ, ಅದಕ್ಕೆ ಇವತ್ತು ನೀವು ಒಂದು ಆಡ್ವೈಜರಿ ಕಮಿಟಿ ಎಂದು ಕೂಡ ಮಾಡಿದ್ದೇವೆಂದು ಹೇಳಿದಿರಿ, ಅದರಲ್ಲಿ ಒಳ್ಳೆಯ ಜನ ಒಳ್ಳೆಯ ತಾಂತ್ರಿಜ್ಞರು, ಅನುಭವಸ್ಥ ಅಧಿಕಾರಿಗಳೂ ಇದ್ದಾರೆ, ಬೇಕಾದರೆ ವಿರೋಧ ಪಕ್ಷದ ಕೆಲವು ಮುಖಂಡರನ್ನು ಕರೆಸಿ ಅದರ ಬಗ್ಗೆ ಆಳವಾಗಿ ಚರ್ಚೆ ಮಾಡಬೇಕಾಗಿದೆ. ಅವಶ್ಯಕತೆ ಬಿದ್ದರೆ ಈ ಸದನ

ದಲ್ಲಿ ಸರ್ಕಾರವರೇ ಒಂದು ನಿರ್ಣಯವನ್ನು ತಂದು ಆ ಡ್ರಾಫ್ಟ್‌ನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲವೆಂದು ನಾವೆಲ್ಲರೂ ಒಂದು ತೀರ್ಮಾನಕ್ಕೆ ಬಂದು ಕೇಂದ್ರ ಸರ್ಕಾರಕ್ಕೆ ತಿಳಿಸಬೇಕಾಗುತ್ತದೆ. ಇಲ್ಲದೇ ಹೋದರೆ ನಮ್ಮ ರಾಜ್ಯಕ್ಕೆ ಆಗಬಾರದ ಅನಾಹುತವಾಗಿ ಹೋಗುತ್ತದೆ. ಬಹುಶಃ ಮುಂದಿನ ಪೀಳಿಗೆಯವರು ಯಾವುದೇ ರೀತಿಯಲ್ಲಿ ಶಪಿಸುವುದಕ್ಕೆ ಅವಕಾಶ ಮಾಡಿಕೊಡಬಾರದೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ಅಧಿವೇಶನ ಮುಂಗಿಯುವುದರೊಳಗೆ ಈ ಸಭೆ ಒಂದು ಠರಾವನ್ನು ಮಾಡಬೇಕಾಗುತ್ತದೆ. We are not going to accept whatever may be the type of the legislation they want to bring and whatever may be the circumstances. ಅವರು ಇನ್ನೊಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ, ಟ್ರಿಬ್ಯುನಲ್‌ಗಳಲ್ಲಿ ಕೆಲವು ಅವಾರ್ಡ್‌ಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸಂಬಂಧಪಟ್ಟ ರಾಜ್ಯ ಸರ್ಕಾರಗಳು ಹಿಂದೆ ಬಿದ್ದಿರುವುದರಿಂದ, ಉಪೇಕ್ಷೆ ಮಾಡಿದ ಸನ್ನಿವೇಶದಿಂದ ಈ ಕಾನೂನನ್ನು ತರತಕ್ಕದ್ದು ಅನಿವಾರ್ಯವೆಂದು ಹೇಳಿದ್ದಾರೆ. ಈ ರೀತಿ ರಾಜ್ಯಗಳಿಗಿರುವ ಅಧಿಕಾರವನ್ನು ಕಿತ್ತು ಕೊಳ್ಳುತ್ತಿರುವುದರಿಂದ ಕರ್ನಾಟಕಕ್ಕೆ ತುಂಬ ಹೊಡೆತ ಬೀಳುತ್ತದೆ. ನಾವು ಈಗ ಏನು ೨–೩ ಕೋಟಿ ರೂಪಾಯಿಗಳನ್ನು ವಿನಿಯೋಗ ಮಾಡಿ ಯೋಜನೆಗಳನ್ನು ಮಾಡಿದ್ದೇವೆ ಅವುಗಳೆಲ್ಲ ವ್ಯರ್ಥವಾಗುತ್ತವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ, ಈ ಬಗ್ಗೆ ಉಡಾಫೆ ಮನೋಭಾವನೆ ಬೇಡ. ಇದರಿಂದ ರಾಜ್ಯದ ಜನತೆಗೆ ಘೋರ ಅಪಘಾತ ಮಾಡಿದಂತಾಗುತ್ತದೆಂದು ತುಂಬ ನೊಂದು ಹೇಳುತ್ತಿದ್ದೇನೆ. ಈ ಅಧಿವೇಶನ ಮುಗಿಯುವುದರೊಳಗೆ ಸರ್ಕಾರ ಒಂದು ಠರಾವನ್ನು ಮುಂಡನೆ ಮಾಡಿ ಆದನ್ನು ತೆಗೆದುಕೊಂಡು ಡೆಲ್ಲಿಗೆ ಜಾತ ಹೋಗಬೇಕಾಗುತ್ತದೆ. ಹಿಂದೆ ಎಲ್ಲ ಹಲವಾರು ಸನ್ನಿವೇಶಗಳಲ್ಲಿ ಡೆಲಿಗೇಷನ್ ಕಳುಹಿಸಿದ್ದೇವೆ. ಮೊದಲು ಠರಾವು ಮಾಡಿದ ನಂತರ ನಿಯೋಗ ಹೋಗಿ ಪ್ರಧಾನಿಯವರಿಗೆ ಆರಿವು ಮಾಡಿಕೊಡತಕ್ಕ ಪ್ರಯತ್ನ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ (ಹುಬ್ಬಳ್ಳಿ).—ಅಧ್ಯಕ್ಷರೇ, ಈಗಾಗಲೇ ಮಾನ್ಯ ಸದಸ್ಯರಾದ ದೇವೇಗೌಡರು ಈ ವಿಚಾರವನ್ನು ಎತ್ತಿದ್ದಾರೆ. ನಿನ್ನೆ ಕೂಡ ಅವರು ತಮ್ಮ ಭಾಷಣದಲ್ಲಿ ಈ ಪ್ರಶ್ನೆಯನ್ನು ಎತ್ತಿದ್ದರು. ಮೊನ್ನೆ ಡಾ. ತಿಮ್ಮೇಗೌಡರು ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ನಮ್ಮ ರಾಜ್ಯದ ಜೀವಾಳದ ಒಂದು ಸಮಸ್ಯೆಯ ಬಗ್ಗೆ ನಿನ್ನೆ ಸರ್ಕಾರದಿಂದ ಉತ್ತರ ಬಯಸಿದ್ದೆ. ನಮ್ಮ ದುರ್ದೈವವೆಂದರೆ ಇವತ್ತು ದೊಡ್ಡ ನೀರಾವರಿ ಯೋಜನೆಗಳಿಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ನಿನ್ನೆ ನಾನು ನಮ್ಮ ಕಿರಿಯ ಮಂತ್ರಿಗಳಾದ ಶ್ರೀಮಾನ್ ಚಿಮ್ಮನಕಟ್ಟಿಯವರು ಬಹಳ ಆಸ್ಥೆ ವಹಿಸಿ ಉತ್ತರ ಕೊಡಲಿಕ್ಕೆ ಪ್ರಯತ್ನ ಮಾಡಿದ್ದನ್ನು ನೋಡಿದೆ. ಆವರ ಬಗ್ಗೆ ನಾನಂ ಏನು ಹೇಳುವುದಿಲ್ಲ, ಅವರು ಹೊಸಬರು, ಇದೇ ಮೊದಲ ಬಾರಿಗೆ ಮಂತ್ರಿಗಳಾಗಿದ್ದಾರೆ. ಇಂಥ ಮಹತ್ವದ ವಿಚಾರವನ್ನು ಎತ್ತಿದಾಗ ಸರ್ಕಾರ ತನ್ನ ನಿಲುವನ್ನು ಹೇಳುವುದಕ್ಕೆ ತಪ್ಪಿದರೆ ಅದು ಸರ್ಕಾರದ ಕರ್ತವ್ಯ ಚ್ಯುತಿಯಾಗುತ್ತದೆಂದು ಹೇಳುತ್ತೇನೆ, ಮಾನ್ಯ ಮುಖ್ಯ ಮಂತ್ರಿಯವರು ಕಾವೇರಿ ಡಿಸ್‌ಪ್ಯೂಟ್ ಬಗ್ಗೆ ನಮ್ಮನ್ನೆಲ್ಲ ಕರೆಸಿ ಮಾತನಾಡಿದರು. ಅಲ್ಲದೆ, ಉಳಿದ ರಾಜ್ಯದ ಮುಖ್ಯ ಮಂತಿಗಳೊಡನೆ ಮತ್ತು ಕೇಂದ್ರ ಸರ್ಕಾರದೊಡನೆ ಸಮಾಲೋಚನೆ ಮಾಡಿದ ಮೇಲೆ ಏನು ನಿರ್ಣಯ ತೆಗೆದು ಕೊಂಡೆವು ಎಂಬುದನ್ನು ತಿಳಿಸುತ್ತೇನೆಂದು ಹೇಳಿದ್ದರು, ಈಗಾಗಲೇ ೨ ಸಾರಿ ಮುಖ್ಯ ಮಂತ್ರಿಗಳೂಡನೆ ಸಮಾಲೋಚನೆ ಮಾಡಲಾಗಿದೆ, ಆದರೆ ಆಲ್ಲಿ ನಡೆದ ವಿಚಾರಗಳು ಏನು ಎಂಬುದು ಗೊತ್ತಾಗಲಿಲ್ಲ. ಈಗ ತಾವು ಆಡ್ಹೆಸರಿ ಕಮಿಟಿಯನ್ನು ಮಾಡಲಾಗಿ ಆದಕ್ಕ ಮಾನ್ಯ ಚನ್ನಬಸಪ್ಪನವರು ಅಧ್ಯಕ್ಷರಾಗಿದ್ದಾರೆ, ಅಹರು ಅನುಭವಿಗಳು. ಆ ಬಗ್ಗೆ ನಾನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಅವರು ಏನು ಒಂದು ಹೇಳಿಕೆ ಕೊಟ್ಟಿದ್ದಾರೆಂದರೆ ನಮ್ಮ ಕಾವೇರಿ ನದಿಯ ವಿವಾದವನ್ನು ನಾವು ಆರ್ಬಿಟ್ರೇಷನ್ನಿಗೆ ಒಪ್ಪಿಸತಕ್ಕ ನಿಲುವನ್ನು ತೆಗೆದುಕೊಳ್ಳಬೇಕೆಂಬ ಮಾತನ್ನು ಹೇಳಿದ್ದಾರೆ. ಆ ರೀತಿ ಅವರು ಹೇಳಬೇಕಾದರೆ ಅವರಿಗೆ ಸರ್ಕಾರ ಅಧಿಕಾರ ಕೊಟ್ಟಿದೆ. ಆದನ್ನು ಈ ಸಭೆಯಲ್ಲಿ ಕೂಡ ಚರ್ಚೆ ಮಾಡಿದ್ದೇವೆ, ಮಾನ್ಯ ಮುಖ್ಯ ಮಂತ್ರಿಗಳು ಕೂಡ ಒಪ್ಪಿದ್ದಾರೆ. ಆದಕ್ಕೆ ಬದಲಾಗಿ ಬೇರೆ ಏನಾದರೂ ನಿಲುವನ್ನು ಸರ್ಕಾರ ತೆಗೆದುಕೊಂಡಿದೆಯೇ ಎಂಬುದನ್ನು ತಿಳಿಸಬೇಕು. ಏನೇ ಆದರೂ ಮಹತ್ವದ ಪ್ರಶ್ನೆಗೆ ಉತ್ತರ ಬರುತ್ತಿಲ್ಲ. ಇದರ ಬಗ್ಗೆ ಹಿಂದೂ ಪತ್ರಿಕೆಯಲ್ಲಿ ಕೂಡ ಬಂದಿದೆ, ಆದನ್ನು ಆಳವಾಗಿ ನೋಡಿದಾಗ, it goes to the very root of the federal strueture of the

Indian Constitution. ರಾಜ್ಯಾಂಗದ ಪ್ರಕಾರ ರಾಜ್ಯಗಳಿಗೆ ಇರತಕ್ಕ ಅಧಿಕಾರಕ್ಕೆ ಕೊಡಲಿ ಪಟ್ಟು ಬೀಳತಕ್ಕ ದಿಸೆಯಲ್ಲಿ ಕಾನೂನು ಮಾಡತಕ್ಕ ಪ್ರಯತ್ನ ಕೇಂದ್ರದಲ್ಲಿ ನಡೆಯುತ್ತಿದೆ. ಇವತ್ತು ಇಂಥ ಒಂದು ಕಾನೂನು ಆದರೆ ಆದರಲ್ಲಿಯೂ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡುವುದರಲ್ಲಿ ಹಿಂದುಳಿದ ಕರ್ನಾಟಕ ರಾಜ್ಯಕ್ಕೆ ದೊಡ್ಡ ಅನ್ಯಾಯವಾಗುತ್ತದೆ. ನನ್ನ ದೃಷ್ಟಿಯಲ್ಲಿ ಗೋದಾವರಿ ನಿರ್ಣಯದಿಂದ ಆದಂತಹ ಅನಾಹುತವನ್ನು ಇನ್ನೂ ತುಂಬಿಕೊಳ್ಳುವುದಕ್ಕೆ ಆಗಿಲ್ಲ. ಇದಕ್ಕೆ ಇಂಥಿಂಥ ವರೇ ಹೊಣೆಗಾರರು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ರಾಜ್ಯದ ಪುನರ್‌ರಚನೆ ಆದಮೇಲೆ ಇದು ವರೆಗೆ ಈ ನೀರಿನ ವಿವಾದದ ಬಗ್ಗೆ ಸರಿಯಾದ ರೀತಿಯಲ್ಲಿ ಒಂದು ನಿಲುವನ್ನು ತೆಗೆದುಕೊಂಡಿಲ್ಲ. ಈ ಬಗ್ಗೆ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಗಹನವಾಗಿ ಆಲೋಚಿಸಬೇಕು. ಹಿಂದೆ ಒಂದು ಸಾರಿ ಬೀಗೆ ಹಾನಿ ಮಾಡತಕ್ಕ ಪ್ರಸಂಗದಲ್ಲಿ ತಡೆಹಿಡಿದಿದ್ದೇವೆ. ಇವತ್ತು ಸರ್ಕಾರ ತನ್ನ ನಿಲುವು ಏನು ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಕಾನೂನು ಮಾಡತಕ್ಕ ವಿಚಾರದಲ್ಲಿ ಏನಾದರೂ ತಿಳಿದಿದೆಯೇ ? ಪ್ರಧಾನ ಮಂತ್ರಿಗಳೊಡನೆಯಾಗಲೀ ಅಥವಾ ಕೇಂದ್ರದ ನೀರಾವರಿ ಮಂತ್ರಿಗಳೊಡನೆ ಏನಾದರು ಚರ್ಚೆ ಮಾಡಿದ್ದೀರಾ ? ಈ ಎಲ್ಲ ವಿಚಾರಗಳ ಬಗ್ಗೆ ವಿವರ ಕೊಡಬೇಕು. ಇವತ್ತು ಆಗದಿದ್ದರೆ ನಾಳೆ ಕೊಡಿ. ನೀವು ಹೀಗೆ ಕುಳಿತರೆ ಬಹಳ ಅನಾಹುತಕ್ಕೆ ಈಡಾಗಬೇಕಾಗುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ.—ಒಂದು ನಿರ್ಣಯ ಮಾಡಬೇಕು. ಬರೀ ಹೇಳಿಕೆ ಕೊಡುತ್ತಾ ಕುಳಿತರೆ ಆಗುವುದಿಲ್ಲ. ಈ ಮನೆ ಸ್ವಲ್ಪ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ನಿರ್ಣಯ ಮಾಡತಕ್ಕದ್ದು ಅವಶ್ಯಕವಾಗಿದೆ. ಮಾನ್ಯ ಅರ್ಥ ಮಂತ್ರಿಗಳು ಉತ್ತರ ಹೇಳುವಾಗ ಈ ಬಗ್ಗೆ ಏನೇನು ಗೊತ್ತಾಗಿದೆ ಎಂಬುದನ್ನು ಹೇಳಬೇಕು, ಎಲ್ಲಿಯ ವರೆಗೆ ಮಾತುಕತೆ ಬಂದಿದೆ ಎಂಬುದನ್ನು ತಿಳಿಸಬೇಕು. ಅದನ್ನೆಲ್ಲ ಈ ಸದನದ ಮೂಲಕ ಕರ್ನಾಟಕದ ಜನತೆಗೆ ತಿಳಿಸುವುದು ಒಳ್ಳೆಯದು. ತಾವು ಇದಕ್ಕೆ ಒಪ್ಪಿಗೆ ಕೊಟ್ಟು ನಿರ್ಣಯ ತಂದರೆ ಒಳ್ಳೆಯದು, ಇಲ್ಲದಿದ್ದರೆ ನಾವೇ ಒಂದು ನಿರ್ಣಯವನ್ನು ತರಬೇಕಾಗುತ್ತದೆಂದು ಹೇಳಿ ಈ ಬಗ್ಗೆ ಸರ್ಕಾರದ ನಿಲುವು ಏನು ಎಂಬುದನ್ನು ಹೇಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಎಲ್. ತಿಮ್ಮೇಗೌಡ (ಬಸವನಗುಡಿ).—ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ನಾಗಾರ್ಜುನ ಸಾಗರಕ್ಕೆ ಗೇಟನ್ನು ಕೊಡತಕ್ಕ ಕಾಲದಲ್ಲಿ ಪ್ಲಾನ್ ಕ್ಲಿಯರ್ ಆಗಿ ಇರಲಿಲ್ಲ. ಆಗ ಕೇಂದ್ರದಲ್ಲಿ ಪಿ.ಎಲ್. ರಾವ್‌ರವರು ನೀರಾವರಿ ಮಂತ್ರಿಗಳಾಗಿದ್ದರು. ಅವರು ಪ್ರಧಾನಿ ಜವಹರಲಾಲ್ ನೆಹರೂ ರವರನ್ನು ಕರೆದುಕೊಂಡು ಹೋಗಲಾಗಿ ಅವರು ೧೦ ಕೋಟಿ ರೂಪಾಯಿಗಳನ್ನು ಕೇಂದ್ರದಿಂದ ಕೊಡ ತಕ್ಕ ವ್ಯವಸ್ಥೆ ಮಾಡಿದರು. ನಂತರ ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತ್ರಿಯವರನ್ನು ಕರೆದುಕೊಂಡು ಹೋಗಲಾಗಿ ಅವರೂ ಕೂಡ ೧೦ ಕೋಟಿ ರೂಪಾಯಿಗಳನ್ನು ಕೇಂದ್ರದಿಂದ ಕೊಡತಕ್ಕ ವ್ಯವಸ್ಥೆ ಮಾಡಿ ದರು. ನಾಗಾರ್ಜುನ ಸಾಗರದಲ್ಲಿ ಇಷ್ಟು ನೀರನ್ನು ಶೇಖರಿಸುತ್ತೇವೆಂಬುದು ಗೊತ್ತಾಗದೆ ಇರಲಿ ಎಂದು ಕ್ರೆಸ್ಟ್ ಗೇಟನ್ನು ಮಾಡಲು ತುಂಗಭದ್ರ ಐರನ್ ಮತ್ತು ಸ್ಟೀಲ್ ಕಂಪನಿಗೆ ಆರ್ಡರ್ ಮಾಡದೆ ಕಲ್ಕತ್ತದಿಂದ ತಂದರು. ಆ ಗೇಟನ್ನು ಅಲ್ಲಿಗೆ ತಂದಾಗ ಆದನ್ನು ಕಲ್ಕತ್ತದಿಂದ ತಂದದ್ದು ಎಂಬುದು ಗೊತ್ತಾಯಿತು. ಈಗಲೂ ಕೂಡ ಕೇಂದ್ರ ಸರ್ಕಾರದಲ್ಲಿ ಕೆಲವು ಮಂತ್ರಿಗಳು ಆವಾವರ ರಾಜ್ಯದ ವಿಚಾರದಲ್ಲಿ ಹೆಚ್ಚಾಗಿ ಶ್ರದ್ಧೆ ಸಹಿಸಿ ಕರ್ನಾಟಕಕ್ಕೆ ಅನ್ಯಾಯ ಮಾಡುತ್ತಾ ಬಂದಿದ್ದಾರೆ. ಇವತ್ತು ಇಲ್ಲಿ ಮತ್ತು ಕೇಂದ್ರದಲ್ಲಿ ಒಂದೇ ಪಕ್ಷದ ಸರ್ಕಾರಗಳಿವೆ. ಆದರೂ ನಾವು ಭಿಕ್ಷೆ ಪಾತ್ರೆ ಹಿಡಿದರೆ ಭಿಕ್ಷೆ ಹಾಕು ತ್ತಾರೆ. ಕೇಂದ್ರ ಸರ್ಕಾರಕ್ಕೆ ಸಲಹೆ ಮಾಡುವಾಗ ಅಲ್ಲಿನ ಅಧಿಕಾರಿಗಳಿಗೆ ಯಾವ ಭಾಷೆಯಲ್ಲಿ ಈ ಸರ್ಕಾರದವರು ಹೇಳಬೇಕೋ ಆ ಭಾಷೆಯಲ್ಲಿ ಹೇಳದಿದ್ದರೆ ನಮ್ಮ ಕರ್ನಾಟಕಕ್ಕೆ ಅನ್ಯಾಯವಾಗುತ್ತದೆ. ಆದುದರಿಂದ, ಮಾನ್ಯ ದೇವೇಗೌಡರು ಸೂಚನೆ ಮಾಡಿದ ಹಾಗೆ ಈ ವಿಷಯ ಸದನದಲ್ಲಿ ಹೆಚ್ಚು ಚರ್ಚೆ ಯಾಗಿ ಒಂದು ನಿರ್ಣಯವನ್ನು ಪಾಸ್ ಮಾಡಬೇಕು. ಈ ಬಗ್ಗೆ ಆಡಳಿತ ಪಕ್ಷದವರಾಗಲೀ, ಮಾನ್ಯ ಅರ್ಥ ಮಂತ್ರಿಗಳಾಗಲೀ ಅಥವಾ ಮಾನ್ಯ ಮುಖ್ಯ ಮಂತ್ರಿಗಳಾಗಲೀ ಒಂದು ನಿರ್ಣಯವನ್ನು ತಂದರೆ ಅದನ್ನು ನಾವು ಸಂಪೂರ್ಣವಾಗಿ ಒಪ್ಪುತ್ತೇವೆ. ಇಲ್ಲದಿದ್ದರೆ, ಮಾನ್ಯ ಬೊಮ್ಮಾಯಿಯವರು ಹೇಳಿದ ಹಾಗೆ ನಾವೇ ತರಬೇಕಾಗುತ್ತದೆ. ಇವತ್ತು ನಮ್ಮ ರಾಜ್ಯಕ್ಕೆ ಆಗತಕ್ಕ ಅನ್ಯಾಯವನ್ನು ತಪ್ಪಿಸಬೇಕು.

ನಾವು ಹೆಚ್ಚಾಗಿ ಆಸಕ್ತಿ ವಹಿಸದೆ ಇದ್ದುದರಿಂದ ಹಿಂದೆ ಕೆಲವು ಲೋಪದೋಷಗಳು ಆಗಿವೆ. ಮುಂದೆ ಯಾದರೂ ಆ ರೀತಿ ಆಗುವುದಕ್ಕೆ ಅವಕಾಶ ಕೊಡದೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಪ್ರಾರ್ಥಿಸಿ ಕೊಳ್ಳುತ್ತೇನೆ.

೧–೦೦ ಪಿ.ಎಂ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂತ ದೇವೇಗೌಡರು, ಬೊಮ್ಮಾಯಿಯವರೂ, ತಿಮ್ಮೇಗೌಡರೂ ಬಹಳ ಮಹತ್ವವಾದ ಹಾಗೂ ಗಂಭೀರವಾದ ಪ್ರಶ್ನೆಯನ್ನು ಎತ್ತಿದ್ದಾರೆ.

MR. SPEAKER.—That is also mentioned in that Statement.

SRI M. VEERAPPA MOILY.—I have seen that. ಈ ಪ್ರಶ್ನೆಯನ್ನು ರಾವ್ ಬಿರೇಂದ್ರಸಿಂಗ್‌ರವರು ಪಳನಿಯಲ್ಲಿ ಸೇರಿದಾಗ ಎತ್ತಿದ್ದರು. ಆಗ ತಮ್ಮ ಅಭಿಪ್ರಾಯ ಕೇಳಬೇಕೆಂದು ತಕ್ಷಣ ಆ ಸಭೆಯಲ್ಲಿ ನಾನು ಹೇಳಿದ್ದೇನೆ. ಪತ್ರಿಕೆಯಲ್ಲಿ ಯಾವ ಪ್ರಸ್ತಾವನೆ ಬಂದಿದೆ, ಇದರಿಂದ ಉದ್ಭವವಾಗತಕ್ಕ ಪರಿಣಾಮಗಳು.

MR. SPEAKER.—May I help you. In item 56 of Seventh Schedule of the Constitution...

SRI M. VEERAPPA MOILY.—I have gone through that Item No. 56. ಈಗ ಮಾನ್ಯ ಸದಸ್ಯರು ಏನು ಪ್ರಸ್ತಾವನೆ ಮಾಡಿದ್ದಾರೆ. ತಮಗೆಲ್ಲಾ ತಿಳಿದಂತೆ ನಮ್ಮ ನಾಯಕರಾಗಲೀ, ನಮ್ಮ ಸರ್ಕಾರವಾಗಲೀ, ರಾಜ್ಯದ ನೆಲ ಮತ್ತು ಜಲದ ವಿಚಾರ ಬಂದಾಗ, ಒಪ್ಪತದಿಂದಲೇ ಪ್ರಶ್ನೆಯನ್ನು ಎತ್ತಿದ್ದೇವೆ, ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಆದರಲ್ಲಿಯೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಕಾವೇರಿ ವಿವಾದದ ಪ್ರಶ್ನೆ ಬಂದಾಗ, ನಾನು ಕೂಡ ಒಂದುಕಡೆ ಚರ್ಚೆಗೆ ಹೋದಾಗ ''ಒಪ್ಪಂದದ ಕಟ್ಟಿನಿಂದ'' ಬಿಡಿಸಬೇಕೆಂಬ ಪ್ರಯತ್ನ ನಡೆದಿತ್ತೋ, ಅದನ್ನು ನಿಶ್ಚಲ ಧೋರಣೆಯಿಂದ ರಾಜ್ಯದ ಹಿತಾಸಕ್ತಿಯಿಂದ ಮಾನ್ಯ ಮುಖ್ಯಮಂತ್ರಿಯವರು ಆ ಬಗ್ಗೆ ಒಂದುರೀತಿಯಾದ ಒಪ್ಪಂದದ ಕಟ್ಟನ್ನು ತೆಗೆದುಹಾಕಿ ಈ ವಿಚಾರದಲ್ಲಿ ಮುಕ್ತವಾದಂತ ಚರ್ಚೆಯಾಗಬೇಕು, ನಮಗೆ ಕಾವೇರಿ ವಿವಾದದ ಬಗ್ಗೆ ನ್ಯಾಯ ದೊರಕಬೇಕೆಂಬ ವಿಚಾರದಲ್ಲಿ ಧೀರೋದಾತ್ತವಾದ ಹೆಜ್ಜೆಯನ್ನು ನಮ್ಮ ಮುಖ್ಯಮಂತ್ರಿಗಳು ಇಟ್ಟಿದ್ದಾರೆ. ಈ ವಿಚಾರದಲ್ಲಿ ನಮ್ಮ ಸರ್ಕಾರ, ನಮ್ಮ ಮುಖ್ಯಮಂತ್ರಿಗಳು ನಾವೆಲ್ಲಾ ಜಾಗೃತರಾಗಿದ್ದೇವೆ. ರಾಜ್ಯದ ಹಿತಾಸಕ್ತಿಯನ್ನು ಕಾಯ್ದುಕೊಳ್ಳುವುದಕ್ಕೆ ನಾವೆಲ್ಲಾ ಜಾಗೃತರಾಗಿದ್ದೇವೆ. ತಾವು ಏನು ಪ್ರಸ್ತಾಪ ಮಾಡಿದ್ದೀರಿ, ಈ ವಿಚಾರವನ್ನು ಸಾಕಷ್ಟು ಸಂಗ್ರಹ ಮಾಡಿ, ಮುಖ್ಯಮಂತ್ರಿಗಳೊಂದಿಗೆ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ಈ ಸದನ ಮುಂಗಿಯವರ ಮೊದಲು ತಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ವಿಷಯದಲ್ಲಿ ಕಾರ್ಯನಿರ್ವಹಿಸುವುದರಲ್ಲಿ ಸರ್ಕಾರ ಹಿಂದೆಮುಂದೆ ನೋಡುವುದಿಲ್ಲವೆಂದು ಅಷ್ಟಕ್ಕೆ ನನ್ನ ವಾದವನ್ನು ಸೀಮಿತಗೊಳಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ನಿಮ್ಮ ಜೊತೆಯಲ್ಲಿ ಈ ಸದನದಲ್ಲಿ ಮತ್ತು ಹೊರಗಡೆ ತಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುಂದುವರಿಸುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರು ಅರ್ಬಿಟ್ರೇಷನ್‌ಗೆ ರೆಫರ್ ಮಾಡತಕ್ಕ ಸ್ಟೇಟ್‌ಮೆಂಟ್ ಇದೆಯೆಂದು ಹೇಳಿದರು. ಇದಕ್ಕೆ ಸರ್ಕಾರದ ಒಪ್ಪಿಗೆ ಇದೆಯೇ ?

SRI M. VEERAPPA MOILY.—He has given some opinion.

SRI H.D. DEVE GOWDA.—He himself made a denial statement.

ಶ್ರೀ ಡಿ.ಟಿ. ರಾವಲು.—ಸ್ವಾಮಿ, ನನ್ನ ಕ್ಷೇತ್ರದ ಮಂಗಳವಾರ ಪೇಟೆಯಲ್ಲಿ ನಡೆದಂತ ಒಂದು ಘಟನೆ ಪ್ರಕಟವಾಗಿದೆ. ಆಲ್ಲಿರತಕ್ಕ ಫ್ರೀ ಮೆಟ್ರಿಕ್ ಹಾಸ್ಟೆಲಿನಲ್ಲಿ ವಿಷಮಿಶ್ರಿತ ಆಹಾರವನ್ನು ಸೇವಿಸಿ, ಸುಮಾರು ೨೫–೩೦ ವಿದ್ಯಾರ್ಥಿಗಳನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು. ಆದರಲ್ಲಿ ಒಬ್ಬನ ಸ್ಥಿತಿ ಚಿಂತಾಜನಕವಾಗಿದೆಯೆಂದು ಪ್ರಕಟವಾಗಿತ್ತು. ಸ್ವಾಮಿ, ಹಾಸ್ಟೆಲ್ ಇರತಕ್ಕ ಪರಿಸರ ಚೆನ್ನಾಗಿಲ್ಲ. ಒಂದು ಚಚ್ಚೌಕದ ಕೊಠಡಿಯಲ್ಲಿ ೨೫–೩೦ ವಿದ್ಯಾರ್ಥಿಗಳನ್ನು ಹಾಕಿರುತ್ತಾರೆ. ಆಲ್ಲಿರತಕ್ಕ ಆಡಿಗೆ ಕೋಣೆ ಕೂಡ

ಶುಚಿಯಾಗಿಲ್ಲ. ಈ ವಿಷಯದಲ್ಲಿ ಮಾನ್ಯ ಮಂತ್ರಿಗಳವರು ಈ ಸದನದ ಮುಂದೆ ಪರದಿಯನ್ನು ತರಿಸಿಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ರಾಂದೇವ್.—ಸ್ವಾಮಿ, ಮಾನ್ಯ ಇಬ್ರಾಹಿಂರವರ ಮೇಲೆ.....

MR. SPEAKER.—There are some items in the agenda. Let that be over. Now papers to be laid on the Table.

PAPERS LAID ON THE TABLE

SRI MALLIKARJUN M. KHARGE (Minister for Revenue).—I lay:

(a) Notification No. REV. CR. 12/81-82 dated 20th April 1981
Suspension of land revenua of 60 villages in Hirekerur Taluk for the year 1980-81.

(b) Notification No. REV. CR. 14/81-82 dated 21st April 1981
Suspension of land revenue in Belghatti Village of Shirahatti Taluk for the year 1980-81

(c) Notification No. REV. CR. 20/81-82 dated 23rd April 1981
Suspension of land revenue of 51 villages in Hubli Taluk for the year 1980-81

(d) Notification No. REV. CR. 22/81-82 dated 25th June 1981
Suspension of land revenue of 14 villages in Kundagol Taluk for the year 1980-81

(e) Notification No. REV. CR. 25/81-82 dated 4th May 1981
Suspension of land revenue of 35 villages in Nargund Taluk for the year 1980-81

(f) Notification No. REV. CR. 26/81-82 dated 6th May 1981
Suspension of land revenue of Shivalli and Wanahalli villages of Dharwad Taluk for the year 1980-81

(g) Notification No. REV. CR. 34/81-82 dated 6th June 1981
Suspension of land revenue of 8 villages in Mundargi Taluk for the year 1980-81

(h) Notification No. REV. CR. 78/81-82 dated 10th February 1981
Suspension of land revenue in respect of 28 Khariff villages in Ron Taluk for the year 1980-81

(i) Notification No. REV. CR. 79/81-82 dated 16th February 1981